## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬಳ್ಳಾರಿಯ ಬಸವನಕುಂಟೆ, ಬೊಂಬು ಬಜಾರ್‌ನಲ್ಲಿ ಶ್ರೀ.ಮೇದ ವಿನಾಯಕ ಮಿತ್ರ ಮಂಡಳಿ ಟ್ರಸ್ಟ್(ರಿ)ಗೆ ಸೇರಿದ ಸ್ವತ್ತಿನಲ್ಲಿ ಸಮುದಾಯ ಭವನ ನಿರ್ಮಿಸುವ ಕುರಿತು.

ಓದಲಾಗಿದೆ: ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇವರ ಪತ್ರ ನಿರ್ದೇಶನಾಲಯ, ಸಂಖ್ಯೆ: ಪವಕನಿ/ ಸಂವಿ/ಸಿಆರ್-86/ 2013-14, ದಿನಾಂಕ: 21-01-2013

******

**ಪ್ರಸ್ತಾವನೆ:**

ನಿರ್ದೇಶಕರು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಇವರು ಮೇಲೆ ಓದಲಾದ ಪತ್ರದಲ್ಲಿ ಶ್ರೀ.ಮೇದ ವಿನಾಯಕ ಮಿತ್ರ ಮಂಡಳಿ ಟ್ರಸ್ಟ್(ರಿ), ರವರಿಗೆ ಸೇರಿದ ಬಳ್ಳಾರಿ ನಗರ, ಸಿರಗುಪ್ಪ ರಸ್ತೆ, ಬಸವನಕುಂಟೆ ಬೊಂಬು ಬಜಾರ್ ಸಿ.ಎಂ.ಸಿ.ವಾರ್ಡ್ ನಂ:25, ಬಳಿ ಇರುವ ಟಿ.ಎಸ್.ನಂ.195/31 ನಲ್ಲಿರುವ ನಿವೇಶನದಲ್ಲಿ ರೂ. 50.00 ಲಕ್ಷಗಳ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ .ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 13 ಪವಯೋ 2013, ಬೆಂಗಳೂರು ದಿನಾಂಕ:07-02-2013**

2012-13ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ, ಬಳ್ಳಾರಿ ನಗರ, ಸಿರಗುಪ್ಪ ರಸ್ತೆ, ಬಸವನಕುಂಟೆ ಬೊಂಬು ಬಜಾರ್ ಸಿ.ಎಂ.ಸಿ.ವಾರ್ಡ್ ನಂ:25, ಬಳಿ ಸಮುದಾಯ ಭವನವನ್ನು ರೂ. 50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ (ಐವತ್ತು ಲಕ್ಷ ರೂಪಾಯಿಗಳು ಮಾತ್ರ) ನಿರ್ಮಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ತಾತ್ವಿಕ ಮಂಜೂರಾತಿ ನೀಡಲಾಗಿದೆ. ಇದನ್ನು ಜಿಲ್ಲಾಧಿಕಾರಿಗಳ ಮುಖಾಂತರ ಕಾರ್ಯಗತಗೊಳಿಸುವುದು.

(1) ಸರ್ಕಾರದ ಆದೇಶ ಸಂಖ್ಯೆ: ಸಕಇ 180 ಪಕವಿ 2011, ದಿನಾಂಕ:28-09-2011ರಲ್ಲಿನ ಮಾರ್ಗಸೂಚಿಯಂತೆ ಕ್ರಮ ಕೈಗೊಳ್ಳುವುದು.ಸದರಿ ಭವನಕ್ಕೆ ಬೇಕಾಗುವ ನಿವೇಶನವನ್ನು ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಥವಾ ಮೇಲ್ಕಂಡ ಟ್ರಸ್ಟ್‌ನಿಂದ ಸರ್ಕಾರಿ ಆದೇಶ ನೀಡಿರುವ ಮಾರ್ಗಸೂಚನೆಗಳಂತೆ ನಿವೇಶನ ಪಡೆಯುವುದು.

(2)ಉದ್ದೇಶಿತ ಭವನದ ಕಟ್ಟಡ ಕಾಮಗಾರಿಗಳಿಗೆ ಸಂಬಂಧಪಟ್ಟ ಪ್ರಾಧಿಕಾರದ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ಪಡೆಯತಕ್ಕದ್ದು.

(3)ಈ ಭವನದ ನಿರ್ಮಾಣ ವೆಚ್ಚವು ಉಲ್ಲೇಖಿತ ಅಂದಾಜು ವೆಚ್ಚ ಮೀರಿದ್ದಲ್ಲಿ ಅಂತಹ ಮೊತ್ತವನ್ನು ಸ್ಥಳೀಯ ಮೂಲಗಳಿಂದ ಸಂಗ್ರಹಿಸಿಕೊಳ್ಳತಕ್ಕದ್ದು.

(4)ಸದರಿ ಭವನದ ನಿರ್ಮಾಣ ಉಸ್ತುವಾರಿಯನ್ನು ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ: ಪರಿಶಿಷ್ಟ ಪಂಗಡಗಳ ಕಲ್ಯಾಣ ಅಧಿಕಾರಿ: ಯೋಜನಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಅಧಿಕಾರಿ/ ಇವರು ನೋಡಿಕೊಳ್ಳತಕ್ಕದ್ದು.

(5)ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಿಗಧಿಗೊಳಿಸಿರುವ "ಕಾರ್ಯವಿಧಾನ" (procedure) ಪಾಲಿಸತಕ್ಕದ್ದು.

ಆ ಸಂಬಂಧದ ವೆಚ್ಚವನ್ನು 2012-13ನೇ ಸಾಲಿನ ಲೆಕ್ಕಶೀರ್ಷಿಕೆ 2225-02-283-0-02 (ಯೋಜನೆ) ಅಡಿ ಗಿರಿಜನ ಉಪಯೋಜನೆಗೆ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.

ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 4 ಟಿಎಫ್‌ಪಿ 2012, ದಿನಾಂಕ:27-04-2012ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ

ಇವರಿಗೆ:

1) ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1 ಮತ್ತು ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಕೃಷಿಭವನ, ಬೆಂಗಳೂರು.
3) ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ,
4) ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಅಧಿಕಾರಿ/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣ ಅಧಿಕಾರಿ/ ಬಳ್ಳಾರಿ ಜಿಲ್ಲೆ,
5) ಶ್ರೀ ಎಂ. ಎಸ್ ಮಹೇಶ್, ಅಧ್ಯಕ್ಷರು, ಶ್ರೀ.ಮೇದ ವಿನಾಯಕ ಮಿತ್ರ ಮಂಡಳಿ ಟ್ರಸ್ಟ್(ರಿ), ಬಳ್ಳಾರಿ ನಗರ, ಸಿರಗುಪ್ಪ ರಸ್ತೆ, ಬಸವನಕುಂಟೆ ಬೊಂಬು ಬಜಾರ್ ಬಳ್ಳಾರಿ ಸಿ.ಎಂ.ಸಿ.ವಾರ್ಡ್ ನಂ:25, ಬಳಿ ಇರುವ ಟಿ.ಎಸ್.ನಂ.195/31.
6) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7) ಸಮಾಜ ಕಲ್ಯಾಣ ಹಾಗೂ ಬಂಧೀಖಾನೆ ಸಚಿವರ ಆಪ್ತ ಕಾರ್ಯದರ್ಶಿಗಳು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ,
9) ಸರ್ಕಾರದ ಉಪ ಕಾರ್ಯದರ್ಶಿಗಳು(2), ಸಮಾಜ ಕಲ್ಯಾಣ ಇಲಾಖೆ,
10) ಶಾಖಾ ರಕ್ಷ ಕಡತ.
11) ಹೆಚ್ಚುವರಿ ಪ್ರತಿ-03.